ಅಧ್ಯಕ್ಷರು : ಇದಕ್ಕೆ ಸ್ಪೆಷಲ್ ಟಾಸ್ಕ್ ಫೋರ್ಸ್ ಎಂದು ಇದೆ. ಈ ಟಾಸ್ಕ್ ಫೋರ್ಸ್‌ನಲ್ಲಿ ಅರಣ್ಯ ಇಲಾಖೆಯವರು ಇರುತ್ತಾರೆ, ಪೋಲೀಸ್ ಇಲಾಖೆಯವರೂ ಇರುತ್ತಾರೆ, ಗುಪ್ತಚಾರ ದಳದವರೂ ಇರುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಇದಕ್ಕೆ ಎಷ್ಟು ಹಣವನ್ನು ಖರ್ಚುಮಾಡಲಾಗಿದೆ ಎಂದು ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿದ್ದೇನೆ. ಅದನ್ನಾದರೂ ಹೇಳಬೇಕಲ್ಲ.

ಅಧ್ಯಕ್ಷರು : ಇದನ್ನು ಗೃಹ ಇಲಾಖೆಗೆ ವರ್ಗಮಾಡಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಗೃಹ ಇಲಾಖೆಯ ಬಗ್ಗೆ ಕೇಳಿಲ್ಲ. ಅರಣ್ಯ ಇಲಾಖೆಯಿಂದ ಹಣವನ್ನು ಖರ್ಚುಮಾಡಿರತಕ್ಕ ಬಗ್ಗೆ ಕೇಳಿದ್ದೇನೆ. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಅರಣ್ಯ ಇಲಾಖೆಯವರು ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂದು ನಾನು ಕೇಳಿದ್ದೇನೆ. ಅರಣ್ಯ ಇಲಾಖೆಯವರು ಖರ್ಚು ಮಾಡಿದ್ದರೆ ಮಾಡಿದ್ದೇವೆಂದು ಹೇಳಲಿ. ಮಾಡಿಲ್ಲದಿದ್ದರೆ ಮಾಡಿಲ್ಲವೆಂದು ಹೇಳಲಿ.

ಶ್ರೀ ಇ.ಟಿ. ಶಂಬುನಾಥ್ : ಈ ವರ್ಷದಲ್ಲಿ ಅರಣ್ಯ ಇಲಾಖೆಯಿಂದ ಯಾವ ಖರ್ಚನ್ನೂ ಇದಕ್ಕಾಗಿ ಮಾಡಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೂಲತಃ ಈ ಪ್ರಶ್ನೆಯನ್ನು ನಾನು ಯಾವ ಇಲಾಖೆಯವರಿಗೆ ಕೇಳಬೇಕು? ಯಾವ ಇಲಾಖೆಯವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ?

ಅಧ್ಯಕ್ಷರು : ನಾನು ಯೋಚನೆ ಮಾಡಿ ನಿಮಗೆ ಹೇಳುತ್ತೇನೆ. ನೀವು ನನಗೆ ಸ್ವಲ್ಪ ಟೈಂ ಕೊಟ್ಟರೆ ನೀವು ಯಾವ ಇಲಾಖೆಯವರನ್ನು ಕೇಳಬೇಕೆಂದು ಹೇಳುತ್ತೇನೆ.

ಬೈಲಹೊಂಗಲ ತಾಲ್ಲೂಕು ಕೆಂಗಾನೂರು ಗ್ರಾಮದಲ್ಲಿ ಮೀನುಗಾರರಿಗೆ ವಸತಿ ನಿರ್ಮಾಣ.

97 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವ್ ಜಿಲ್ಲೆ ಸೌದತ್ತಿ ತಾಲ್ಲೂಕು ಮಾಟೊಳ್ಳಿ ಹಾಗೂ ಬೈಲಹೊಂಗಲ ತಾಲ್ಲೂಕು ಕೆಂಗಾನೂರು ಗ್ರಾಮದಲ್ಲಿ ಮೀನುಗಾರರ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಬೇಡಿಕೆ ಬಂದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಮೀನುಗಾರರ ಸಲುವಾಗಿ ಮನೆಗಳನ್ನು ಕಟ್ಟಿಸಿಕೊಡಲು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಈ ಮೀನುಗಾರರು ಮಲಪ್ರಭಾ ಮುಳುಗಡೆಯಾದ ಪ್ರದೇಶದವರಾಗಿದ್ದು, ಮುಳುಗಡೆ ಪ್ರದೇಶದ ಮೀನುಗಾರರ ಅನುಕೂಲತೆಗಾಗಿ ಮನೆಗಳನ್ನು ಕಟ್ಟಿಸಿಕೊಡಲು ಹಿಂದಿನ ಸರ್ಕಾರ ಆಶ್ವಾಸನೆ ನೀಡಿದ್ದರೂ ಕೂಡ ಇದುವರೆಗೂ ಏಕೆ ಕಾರ್ಯಗತಗೊಂಡಿರುವುದಿಲ್ಲ.

ಈ) ಆದ್ದರಿಂದ ಕೂಡಲೇ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು?

ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು) :

ಅ) ಹೌದು.

ಆ) ಈ ವಿಷಯದ ಬಗ್ಗೆ ಜರೂರಾಗಿ ಪರಿಶೀಲನೆ ನಡೆಸಿ ನಿರ್ವಸತಿ ಮೀನುಗಾರರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಸವಿಸ್ತಾರ ವರದಿ ಸಲ್ಲಿಸುವಂತೆ ಬೆಳಗಾಂ ಜಿಲ್ಲೆಯ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರವರಿಗೆ ಸೂಚಿಸಿದೆ.

ಇ) ಈ ಬಗ್ಗೆ ಆಶ್ವಾಸನೆ ನೀಡಿರುವುದಕ್ಕೆ ಯಾವುದೇ ಪುರಾವೆಗಳು ಮೀನುಗಾರಿಕೆ ಇಲಾಖೆಯಲ್ಲಿ ಇರುವುದಿಲ್ಲ.

ಈ) ಕೇಂದ್ರ ಹಣಕಾಸಿನ ನೆರವಿನೊಂದಿಗೆ ಈ ಯೋಜನೆಯನ್ನು 8ನೇ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಮಾಟೊಳ್ಳಿ ಮತ್ತು ಕೆಂಗಾನೂರು ಗ್ರಾಮಗಳಲ್ಲಿ ಮೀನುಗಾರರಿಗೆ ಎಷ್ಟು ಮನೆಗಳು ಬೇಕಾಗಿವೆ ಎಂದು ಸರ್ಕಾರದವರು ಸರ್ವೆ ಮಾಡಿದ್ದಾರೆ? ಸರ್ವೆ ಮಾಡಿದ್ದರೆ, 1974ನೇ ಇಸವಿಯಿಂದ ಇವತ್ತಿನವರೆಗೂ ಅವರು ಮನೆಗಳನ್ನು ಕೇಳುತ್ತಲೇ ಇದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.

ಇನ್ನು ಎರಡನೆಯದಾಗಿ, ನಿರ್ದಿಷ್ಟವಾಗಿ ಎಷ್ಟು ದಿವಸದಲ್ಲಿ ಅವರಿಗೆ ನೀವು ಮನೆಗಳನ್ನು ಕೊಡುತ್ತೀರಿ? ಅವರಿಗೋಸ್ಕರ ಸರ್ಕಾರದವರು ಜಮೀನನ್ನು ಏನಾದರೂ ಸ್ವಾಧೀನ ಪಡಿಸಿಕೊಂಡಿದ್ದಾರೆಯೇ?

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ 2 ಗ್ರಾಮಗಳಲ್ಲಿ ನಾವು ಸರ್ವೆ ಮಾಡಿರತಕ್ಕ ಪ್ರಕಾರ ಮೀನುಗಾರಿಕೆ ಕೆಲಸಮಾಡುವ 40 ಜನರನ್ನು ನಾವು ಗುರ್ತಿಸಿದ್ದೇವೆ. ಇದು ನ್ಯಾಷನಲ್ ವೆಲ್‌ಫೇರ್ ಫಂಡ್ಸ್ ಫಾರ್ ಫಿಷರ್‌ಮೆನ್ ಎನ್ನುವ ಕೇಂದ್ರಸರ್ಕಾರದ ಯೋಜನೆ. ಈ ಯೋಜನೆಯ ಪ್ರಕಾರ, 50 ಪರ್ಸೆಂಟ್‌ನ್ನು ಕೇಂದ್ರ ಸರ್ಕಾರವೂ, ಉಳಿದ 50 ಪರ್ಸೆಂಟ್ ಹಣವನ್ನು ರಾಜ್ಯಸರ್ಕಾರವೂ ಖರ್ಚುಮಾಡಬೇಕಾಗುತ್ತದೆ. ಈ 40 ಜನ ಮೀನುಗಾರರು ಯಾರಿದ್ದಾರೆ ಇವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾದ ಕೆಲಸವನ್ನು ನಾವು ಮಾಡುತ್ತಿದ್ದೇವೆ. But the requirement is, they should not own any house and they should not have the sites. ಇದಕ್ಕೆ ಬೇಕಾದ ಸೈಟುಗಳ ಬಗ್ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಸಂಬಂಧಪಟ್ಟ ಶಾಸಕರೂ ಕೂಡ ಪ್ರಯತ್ನ ಮಾಡಿ ಸೈಟುಗಳನ್ನು ಕೊಡಿಸಿದರೆ ನಾವು ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ತಯಾರಿದ್ದೇವೆ.

This year government has given the contribution of Rs. 25 lakhs, 25 ಲಕ್ಷ ರೂಪಾಯಿಗಳನ್ನು ಮಡಗಿದ್ದೇವೆ. ಈ ಒಂದು 25 ಲಕ್ಷದಮೇಲೆ ಕೊಡಬೇಕಾದಂಥ ಹಣವೇನಿದೆ ಅದನ್ನೂ ನಾವು ಕೊಡಬೇಕೆನ್ನುವ ಅಭಿಪ್ರಾಯದಲ್ಲಿದ್ದೇನೆ. It depends on the budget. I am trying for that because I have been getting many letters from the respective MLAs to construct these houses. Already we are in the process of constructing 600 houses which are sanctioned. ಇನ್ನು ಉಳಿದದ್ದನ್ನು ಬರುವ ವರ್ಷದಲ್ಲಿ ಕೂಡ ನಾವು ಮಾಡಬೇಕೆಂದು ಹೇಳುತ್ತಿದ್ದೀರಿ. ನಾವು ನಮ್ಮ ಕಾಂಟ್ರಿಭ್ಯೂಷನ್ ಕೊಟ್ಟರೆ ಸೆಂಟ್ರಲ್ ಗೌವರ್ನಮೆಂಟ್ 50 ಪರ್ಸೆಂಟ್ immediately they will sanction and we are sure that they will take up these constructions. Antoher question is, that assurance had been given by the government

somethime ago to construct these houses. Unfortunately, my search for this assurance given by the government, I could not get it from the Fisheries Department. Probably, about 20 or 25 years back when these lands were submerged, assurance must have been given. I am not certain about that. But my department at no point of time has given the assurance to build the houses. However, I am confident, with the available money and with the money I am getting after the budget, because I am trying for that, I will see that Mr. Koujalagi's demand is met.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ರಘುಪತಿಯವರು ಫಿಷರೀಸ್ ಮಿನಿಸ್ಟರ್ ಇದ್ದಾಗ ಆ ಕಾಲಕ್ಕೆ ಬಜೆಟ್ ಅಧಿವೇಶನದಲ್ಲಿ ನಾನು ಕ್ವಶ್ಚನ್‌ನ್ನು ಕೇಳಿದ್ದೆ. ಆ ಕಾಲಕ್ಕೆ ಕೊಡುತ್ತೇವೆಂದು ಹೇಳಿದ್ದರು. ಲ್ಯಾಂಡ್ ಬಗ್ಗೆ ನಾವು ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಮಲಪ್ರಭಾ ಪ್ರಾಜೆಕ್ಟ್, ಸವದತ್ತಿ ಅವರಿಗೆ ಪತ್ರ ಬರೆದು ಸ್ವತಃ ಲ್ಯಾಂಡ್ ಕೊಡುವುದಕ್ಕೆ ತಯಾರು

ಇದ್ದೇವೆ. ಆದರೆ ಡಿಪಾರ್ಟ್‌ಮೆಂಟಿನವರಿಗೆ – ಪತ್ರ ಬರೆದರೆ ಅವರು ತಯಾರಿಲ್ಲ, ನಾನು ಏನು ಮಾಡಲಿ ಎಂದು ಹೇಳುತ್ತಾರೆ. ನಾನು ಮೂರು ಪತ್ರ ಬರೆದಿದ್ದೇನೆ. Unless the government ask us ನಾವು ಕೊಡಲಿಕ್ಕೆ ಬರುವುದಿಲ್ಲ. ಅದು ರಿಹ್ಯಾಬಿಲಿಟೇಷನ್ ಏರಿಯಾ ಇದೆ, ಅದರ ಸಲುವಾಗಿ ನಾವು ಕೊಡಲಿಕ್ಕೆ ಪ್ರಾವಿಷನ್ ಇದೆ ಎಂದು ಡೆಪ್ಯುಟಿ ಕಮಿಷನರ್ ಸ್ಪೆಷಲ್ ಲ್ಯಾಂಡ್ ಅಕ್ವಿವೀಷನ್, ಮಲಪ್ರಭಾ ಪ್ರಾಜೆಕ್ಟ್ ಅವರು ಹೇಳುತ್ತಾರೆ. ನಿಮಗೆ ಎಷ್ಟು ಲ್ಯಾಂಡ್ ಡಿಕ್ಲೇರ್ ಮಾಡುತ್ತಾರೆ. ಅಷ್ಟು ಕೊಡುತ್ತೇವೆಂದು ಆ ಸಲುವಾಗಿ ಡಿಪಾರ್ಟ್‌ಮೆಂಟ್‌ಗೆ ಪತ್ರ ಬರೆದರೂ ಏನೂ ಮಾಡಲಿಕ್ಕೆ ಬರುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದಕಾರಣ ನಿರ್ದಿಷ್ಟವಾಗಿ ತಾವು ಸರ್ಕಾರಕ್ಕೆ ಕನಿಷ್ಟಪಕ್ಷ ಪತ್ರ ಬರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಪತ್ರ ಬರೆದನಂತರ ತಾವು ಇಂಟರೆಸ್ಟ್ ತೆಗೆದುಕೊಂಡು ಈ ಕೆಲಸವನ್ನು ಮಾಡಿಕೊಡಬೇಕು. ವಿತಕ್ಕೆಂದರೆ ನಿಜವಾಗಿಯೂ ಮಲಪ್ರಭಾ ಮುಳುಗುಪ್ರದೇಶದಲ್ಲಿ ಉತ್ತಮವಾದ ಮಿನು ಸಿಕ್ಕುತ್ತದೆ. ಅದು ಎಲ್ಲಕಡೆ ಬಹಳ ಪ್ರಸಿದ್ಧಿಯಾಗಿದೆ.

(ಗೊಂದಲ)

ಶ್ರೀ ಎಸ್. ಹೆಚ್. ಕೌಜಲಗಿ : ಹಳ್ಳದಮಿನು, ಹೊಳೆಮಿನು, ಸಮುದ್ರದಮಿನು ಈ ಮೂರು ಬಹಳಟೇಸ್ಟ್ ಇರುತ್ತದೆ.

ಅಧ್ಯಕ್ಷರು : ಈಗ ತಾವು ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಶಾಸಕರ ಬಾಯಲ್ಲಿ ನೀರು ಬರುವಂತೆ ಮಾಡಿಬಿಟ್ಟಿದ್ದೀರಿ. ತಾವು ಮಿನು ವಿಚಾರ ಪ್ರಸ್ತಾಪ ಮಾಡಿ ಮಾನ್ಯ ರಘುಪತಿಯವರು ಆಶ್ವಾಸನೆಯನ್ನು ಕೊಟ್ಟಿದ್ದರೆಂದು ಹೇಳಿದಿರಿ ಅದನ್ನು ಇಂಪ್ಲಿಮೆಂಟ್ ಮಾಡಿಕೊಡಿ ಎಂದು ಹೇಳಿದರೆ ಅಷ್ಟು ಸಾಕು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಘುಪತಿಯವರು ಆಶ್ವಾಸನೆಯನ್ನು ಕೊಟ್ಟಿದ್ದರೆ ಅದನ್ನು ನಾನು ನೋಡುತ್ತೇನೆ. ಒಂದು ವೇಳೆ ಅವರು ಕೊಡದಿದ್ದರೂ, ಆಗದೆ ಇದ್ದರೂ ಕೂಡ ನಾನು ಮಾಡಿಕೊಡುತ್ತೇನೆ. ಮತ್ತೆ ಅವರು ಫಿಷರೀಸ್ ಡಿಪಾರ್ಟ್‌ಮೆಂಟ್‌ಗೆ ಲೆಟರ್‌ನ್ನು ಕಳುಹಿಸಿಕೊಡಬೇಕೆಂದು ಏನು ಹೇಳಿದ್ದಾರೆ

ಆ ವಿಷಯದಲ್ಲೂ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಸಮುದ್ರದ ಬದಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಿನುಗಾರರು ಮನೆಗಳನ್ನು ಕಟ್ಟಲು ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಇಲಾಖೆಯವರು ಹೇಳುತ್ತಾರೆ, ಸಮುದ್ರದ ಬದಿಯಲ್ಲಿ ಕಟ್ಟಿದ ಮನೆಗಳು ಸಮುದ್ರದ ಕೊರೆತದಿಂದ ಮುಳುಗಿ ಹೋಗುವುದರಿಂದ ಅಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಸಮುದ್ರದ ಬದಿಯಲ್ಲಿ ಮೀನುಗಾರರು ಮನೆ ಕಟ್ಟುವುದಾದರೆ ಅವರಿಗೆ ಸೌಲಭ್ಯ ಒದಗಿಸಿಕೊಡಬೇಕು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಇದು 1988 ರಲ್ಲಿ ಶುರುವಾದ ಸ್ಕೀಂ. ಈ ಸ್ಕೀಮಿಗೆ ಸೆಂಟ್ರಲ್ ಗವರ್ನಮೆಂಟ್‌ನಿಂದ ಏನ ಡೈರೆಕ್ಷನ್ ಸಿಕ್ಕಿತ್ತು ಎಂದರೆ ಒಂದೇ ಸ್ಥಳದಲ್ಲಿ ನೂರು ಮನೆಗಳನ್ನು ತೆಗೆದುಕೊಳ್ಳಬೇಕು ಎಂದು. ಈಗ ಅದು ಬದಲಾವಣೆಯಾಗಿ 10-20 ಮನೆಗಳನ್ನು ಕಟ್ಟಬಹುದೆಂದು ಬಂದಿದೆ. 1988 ರೂಲ್ ರಿಲ್ಯಾಕ್ಸ್ ಆಗಿ 10 ಮನೆಗಳ ಮೇಲೆ ಕಟ್ಟಬಹುದೆಂದು ಬಂದಿದೆ.

ತೋಟದ ಬೆಳೆಗಾರರ ಸಹಕಾರ ಮಾರಾಟ ಸಂಘಗಳ ನಿವ್ವಳ ಆದಾಯ

455 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಸನ್ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನಲ್ಲಿರುವ ತೋಟದ ಬೆಳೆಗಾರರ ಸಹಕಾರ ಮಾರಾಟ ಸಂಘದ (ಲಾಲ್‌ಬಾಗ್) 1990-91ನೇ ಸಾಲಿನ ನಿವ್ವಳ ಆದಾಯವೆಷ್ಟು?

ಆ) 1991-92ನೇ ಸಾಲಿನಲ್ಲಿ ಆಗಬಹುದಾದ ಅಂದಾಜು ನಷ್ಟವೆಷ್ಟು?

ಇ) 1991-92 ನೇ ಸಾಲಿನಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಈವರೆವಿಗೂ ಕೊಂಡು ಕೊಳ್ಳಲಾದ ಹಣ್ಣು, ತರಕಾರಿಗಳ ಪ್ರಮಾಣವೆಷ್ಟು? (ವಿವರ ನೀಡುವುದು)

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) 8.77 ಲಕ್ಷರೂಪಾಯಿಗಳು.

ಆ) ನಷ್ಟ ಆಗುವ ಸಂಭವವಿಲ್ಲ.

ಇ) ಹಣ್ಣುಗಳು - 7,38,801 ಕೆ.ಜಿ.ಗಳು.
ತರಕಾರಿಗಳು 19,40,266ಕೆ.ಜಿ.ಗಳು
(ಜನವರಿ ಮಾಹೆ ಅಂತ್ಯದವರೆಗೆ)

ಶ್ರೀ ಸಿ.ಎಂ. ಲಿಂಗಪ್ಪ : ಇಲ್ಲಿ ನೀಡಿರತಕ್ಕ ಉತ್ತರವನ್ನು ನೋಡಿದರೆ ವಸ್ತು ಸ್ಥಿತಿಯನ್ನು ಮರೆಮಾಚಿ ಸದನಕ್ಕೆ ಆತೃಪ್ತಿಯಾಗುವ ರೀತಿಯಲ್ಲಿ ಉತ್ತರ ಕಳುಹಿಸಿದಂತೆ ಕಾಣುತ್ತದೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ಕೊಂಚ ಗಮನ ಹರಿಸಿದ್ದರೆ ಪರಿಸ್ಥಿತಿ ಏನೆಂದು ಅರ್ಥವಾಗುತ್ತಿತ್ತು. 1991ರ ಆಗಸ್ಟ್‌ನಲ್ಲಿ ಪ್ರಾರಂಭವಾಗಿ 16-17 ಲಕ್ಷ ರೂಪಾಯಿಗಳು ನಷ್ಟವಾಗಿರುವ ಸಹಕಾರ ಸಂಘದಲ್ಲಿ ನಷ್ಟವಾಗುವ ಸಂಭವ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ತಾತ್ಕಾಲಿಕವಾಗಿ ಪ್ರತಿ ತಿಂಗಳು ಮಾಡತಕ್ಕ ಸ್ಟೇಟ್‌ಮೆಂಟ್‌ನಲ್ಲಿ ಲಾಭ ನಷ್ಟ ಎಷ್ಟು ಎಂದು ತಿಳಿಸಬಹುದಿತ್ತು. ಅದನ್ನು ಹಾಕಿಲ್ಲವೆಂದು ಹೇಳುತ್ತಾರೆ. ಈಗ ಅಲ್ಲಿ ಏನೇನು ಆಗಬಾರದು ಅದೆಲ್ಲ ನಡೆಯುತ್ತಿದೆ. ಅಲ್ಲಿನ ಮ್ಯಾನೇಜರನ್ನು ಈಗ್ಗೆ ಒಂದೂವರೆ ತಿಂಗಳ ಹಿಂದೆಯೇ ಮನೆಗೆ ಕಳುಹಿಸಿ ಕಛೇರಿಗೆ ಬೀಗ ಹಾಕಿದ್ದಾರೆ. 4 ವ್ಯಾನ್‌ಗಳಿಗೆ ಹಣ ಕೊಟ್ಟಿದ್ದರೂ 3 ವ್ಯಾನ್‌ಗಳು ಮಾತ್ರ